ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕಣ ಇಲಾಖೆಯ ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಟ್ಟಡಗಳು, ನೃಪತುಂಗ ರಸ್ತೆ, ಬೆಂಗಳೂರು-560 001

ಸಂಖ್ಯೆ:ಸಿ1(7)ಸ್ವ.ಚಾ.ಬ:147/13-14 ದಿನಾಂಕ:-18-06-2014

**ಸುತ್ತೋಲೆ**

ವಿಷಯ: ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿನ ಗ್ರೂಪ್-ಬಿ ಹಾಗೂ ತತ್ಸಮಾನ ವೃಂದದ 1994ನೇ ಸಾಲಿನ ಅಧಿಕಾರಿಗಳಿಗೆ ಸ್ವಯಂಚಾಲಿತ ವೇತನ ಬಡ್ತಿ ಮಂಜೂರಾತಿಗಾಗಿಪ್ರಸ್ತಾವನೆಯನ್ನು ಸಲ್ಲಿಸುವ ಬಗ್ಗೆ

ಉಲ್ಲೇಖ: 1. ಸರ್ಕಾರದ ಆದೇಶದ ಸಂಖ್ಯೆ: ಎಫ್‌ಡಿ 25 ಎಸ್‌ಆರ್‌ಪಿ91 ದಿನಾಂಕ:-01-02-1993

2. ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 24ಎಸ್‌ಆರ್‌ಪಿ 2013(11) ಬೆಂಗಳೂರು ದಿನಾಂಕ:14-11-2013

3. ಈ ಕಛೇರಿಯ ಪತ್ರ ಸಂಖ್ಯೆ:ಸಿ1(7)ಸ್ವ.ಚ.ಬ;ಅಭಿಮತ;147/13-14 ದಿನಾಂಕ:-28-04-2014

4. ಈ ಕಛೇರಿಯ ಸುತ್ತೋಲೆ ಸಂಖ್ಯೆ :ಸಿ1(7)ಸ್ವ.ಚಾ.ಬ:/ಸುತ್ತೋಲೆ/102/13-14 ದಿನಾಂಕ:-09-12-2013

&&&&&

ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ 1994ನೇ ಸಾಲಿನ ಗ್ರೂಪ್-ಬಿ ಪ್ರೌಢಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ವೃಂದದ ಆಯ್ಕೆಹೊಂದಿ ಪ್ರಸ್ತುತ ಶಿಕ್ಷಣಾಧಿಕಾರಿಗಳು/ಉಪನಿರ್ದೇಶಕರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಗ್ರೂಪ್-ಎ ಕಿರಿಯ ವೇತನ ಶ್ರೇಣಿಯಲ್ಲಿ ವೇತನ ಪಡೆಯುತ್ತಿದ್ದು ಈ ಹಿಂದೆ ಗ್ರೂಪ್-ಬಿ ಹುದ್ದೆಯಲ್ಲಿ 15ವರ್ಷಗಳ ಸ್ವಯಂಚಾಲಿತ ವೇತನ ಬಡ್ತಿ ಪಡೆಯುವವರೆವಿಗೂ ಸದರಿ ವೇತನ ಶ್ರೇಣಿಯಲ್ಲಿ ಮುಂದುವರೆಯಲು ಅಭಿಮತ ನೀಡದೇ ಇದ್ದ ಅಂತಹ ಅಧಿಕಾರಿಗಳಿಗೆ ಉಲ್ಲೇಖ-2ರ ಪತ್ರದಲ್ಲಿ ಈ ಹಿಂದಿನ ವೇತನ ಶ್ರೇಣಿಯಲ್ಲಿ ಮುಂದುವರೆಯಲು ಅವಕಾಶ ಕಲ್ಪಿಸಿದ್ದು ದಿನಾಂಕ:31-12-2013ರೊಳಗೆ ಸಲ್ಲಿಸಲಾದ ಪ್ರಸ್ತಾವನೆಗಳನ್ನು ಪರಿಶೀಲಿಸಿದ್ದು ಈ ಸಂಬಂಧ ಅಗತ್ಯ ದಾಖಲೆಗಳು ಬೇಕಾಗಿರುತ್ತದೆ. ಈ ಪತ್ರದೊಂದಿಗೆ ಲಗತ್ತಿಸಲಾದ ಚೆಕ್‌ಲಿಸ್ಟ್‌ನಂತೆ ಅಡಕಗಳನ್ನು ದೃಢೀಕರಣದೊಂದಿಗೆ ಹಾಗೂ ಸಂಬಂದಿಸಿದ ಮೇಲಾಧಿಕಾರಿಗಳ ಶಿಪಾರಸ್ಸಿನೊಂದಿಗೆ ಈ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ.

**(ಕರಡು ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)**

19/6

ಅಪರ ಆಯುಕ್ತರು (ಆಡಳಿತ)

18/6/14

**ಇವರಿಗೆ:**

1. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ ರವರಿಗೆ ಮಾಹಿತಿಗಾಗಿ.
2. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರು.
3. ಬೆಂಗಳೂರು ಆಯುಕ್ತಾಲಯ ವ್ಯಾಪ್ತಿಯ ಎಲ್ಲಾ ಜಿಲ್ಲಾ ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
4. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಸಹ ನಿರ್ದೇಶಕರು ಹಾಗೂ ಸಿ.ಟಿ.ಇ.ಗಳಲ್ಲಿನ ಪ್ರಾಂಶುಪಾಲರು.
5. ಬೆಂಗಳೂರು ಆಯುಕ್ತಾಲಯ ವ್ಯಾಪ್ತಿಯ ಎಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು(ಆಡಳಿತ) ಹಾಗೂ ಎಲ್ಲಾ ಡಯಟ್ ಪ್ರಾಂಶುಪಾಲರಿಗೆ.
6. ಮಾನ್ಯ ಆಯುಕ್ತರ ಆಪ್ತ ಕಾರ್ಯದರ್ಶಿಗಳಿಗೆ.
7. ಕಛೇರಿ ಪ್ರತಿ.

**1994ನೇ ಸಾಲಿನ ಅಧಿಕಾರಿಗಳಿಗೆ 15 ವರ್ಷಗಳ ಸ್ವಯಂಚಾಲಿತ ಬಡ್ತಿ ಮಂಜೂರು ಮಾಡುವ ಬಗ್ಗೆ ಚೆಕ್‌ಲಿಸ್ಟ್**

| | | |
|---|---|---|
| | ಜೇಷ್ಠತೆ ಕ್ರಮ ಸಂಖ್ಯೆ (ಮುಖ್ಯ ಶಿಕ್ಷಕರ ವೃಂದದಲ್ಲಿ) | |
| 2. | ಕೆ.ಪಿ.ಎಸ್.ಸಿ ಕ್ರಮ ಸಂಖ್ಯೆ: | |
| 3. | ಅಧಿಕಾರಿಯ ಹೆಸರು,/ಪದನಾಮ/ ಸೇವೆ ಸಲ್ಲಿಸುತ್ತಿರುವ ಕಛೇರಿ ವಿಳಾಸ | |
| 4. | ಗ್ರೂಪ್–ಬಿ ಹುದ್ದೆಯಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಾಂಕ | |
| 5. | 15 ವರ್ಷಗಳ ಸ್ವಯಂಚಾಲಿತ ಬಡ್ತಿಗೆ ಅರ್ಹರಾದ ದಿನಾಂಕ | |
| 6. | ಹಾಲಿ ಪಡೆಯುತ್ತಿರುವ ವೇತನ ಮತ್ತು ವೇತನ ಶ್ರೇಣಿ | |
| 7. | ಕಾಲಮಿತಿ ಬಡ್ತಿಯಲ್ಲಿ ನಿಗಧಿ ಪಡಿಸಿದ ವೇತನ /ವೇತನ ಶ್ರೇಣಿ ಹಾಗೂ ಮಂಜೂರಾದ ಪ್ರತಿ ಸಲ್ಲಿಸುವುದು | |
| 8. | 15 ವರ್ಷಗಳ ಸ್ವಯಂಚಾಲಿತ ಬಡ್ತಿಯಲ್ಲಿ ನಿಗದಿಪಡಿಸಬೇಕಾದ ವೇತನ /ವೇತನ ಶ್ರೇಣಿ | |
| 9. | ಮುಂಬಡ್ತಿ ಹುದ್ದೆಗೆ ನಿಗಧಿಪಡಿಸಲಾದ ಇಲಾಖಾ ಪರೀಕ್ಷೆಗಳು/ ತೇರ್ಗಡೆ/ತೇರ್ಗಡೆಯಾದ ವರ್ಷದ ಬಗ್ಗೆ ವಿವರಗಳು (ದೃಢೀಕೃತ ದಾಖಲೆಗಳೊಂದಿಗೆ) | |
| 10. | ಖಾಯಂಪೂರ್ವ ಸೇವಾ ಅವಧಿ ತೃಪ್ತಿಕರ ಎಂದು ಘೋಷಣೆ ಆಗಿರುವ ಬಗ್ಗೆ ಆದೇಶದ ಪ್ರತಿ | |
| 11. | ಸ್ವಯಂಚಾಲಿತ ಬಡ್ತಿ ನೀಡುವ ಅವಧಿಯಲ್ಲಿ ಶಿಸ್ತು ಕ್ರಮ ಎದುರಿಸುತ್ತಿದ್ದಾರೆಯೇ/ ಅಥವಾ ದಂಡನೆ ವಿಧಿಸಲಾಗಿದೆಯೇ/ನಂತರದಲ್ಲಿ ಶಿಸ್ತುಕ್ರಮದ ಮಾಹಿತಿ | |
| 12. | 05 ವರ್ಷಗಳ ವಾರ್ಷಿಕ ಕಾರ್ಯ ನಿರ್ವಹಣಾ ವರದಿಗಳು ತೃಪ್ತಿಕರ ಇರುವ ಬಗ್ಗೆ ಮಾಹಿತಿ ( 2009–10ರಿಂದ 2013–14) ( ಸೂಕ್ತ ಪ್ರಾಧಿಕಾರದ ಷರಾ, ಸಹಿಯೊಂದಿಗೆ) | |
| 13. | ಪ್ರೊಬೇಷನರಿ ಮುಖ್ಯ ಶಿಕ್ಷಕರಾಗುವ ಪೂರ್ವದಲ್ಲಿ ಹಿಂದಿನ ಸರ್ಕಾರಿ ಸೇವೆಯ ಹುದ್ದೆಯಲ್ಲಿ ನಿರಂತರ 15 ವರ್ಷಗಳ ಸೇವೆಯನ್ನು ಪೂರೈಸಿ ಸ್ವಯಂಚಾಲಿತ ಬಡ್ತಿ ವೇತನ ಮಂಜೂರಾಗಿದ್ದರೆ ಮಾಹಿತಿ | |
| 14. | ದಿನಾಂಕ:03–07–2007ರಂದುಮುಖ್ಯ ಶಿಕ್ಷಕರ ವೃಂದದಿಂದ ಶಿಕ್ಷಣಾಧಿಕಾರಿ ವೃಂದಕ್ಕೆ ಸ್ಥಾನಪನ್ನ ಬಡ್ತಿಯ ವೇತನ ನಿಗದಿಯಾದ ವಿವರ. ವೇತನ ನಿಗದಿಯಾಗಿರುವ ಬಗ್ಗೆ ದಾಖಲೆ ಲಗತ್ತಿಸುವುದು | |

" ಮೇಲಿನಂತೆ ನಮೂದಿಸಿ ಸಲ್ಲಿಸಿರುವ ಮಾಹಿತಿಗಳು ನೈಜತೆಯಿಂದ ಕೂಡಿರುತ್ತವೆ ಎಂದು ದೃಢೀಕರಿಸಿದೆ.

( )

ಅಧಿಕಾರಿಯ ಹೆಸರು / ಸಹಿ

| | | |
|---|---|---|
| 15 | 15 ವರ್ಷಗಳ ಸ್ವಯಂಚಾಲಿತ ಬಡ್ತಿ ಮಂಜೂರು ಮಾಡುವ ಬಗ್ಗೆ ಶಿಪಾರಸು ಮಾಡುವ ಅಧಿಕಾರಿಯ ಸ್ಪಷ್ಟ ಅಭಿಪ್ರಾಯ /ಶಿಪಾರಸ್ಸು | |
| 16 | ಷರಾ | |

ಶಿಪಾರಸು ಮಾಡುವ ಅಧಿಕಾರಿಯ:

ಸಹಿ (ಮೊಹರಿನೊಂದಿಗೆ)

ವಿ.ಸೂ: ಮೇಲಿನ ಮಾಹಿತಿಯನ್ನು ಸ್ಪಷ್ಟವಾಗಿ ನಮೂದಿಸುವುದು. ಹಾಗೂ ಸಂಬಂಧಿಸಿದ ಅಡಕಗಳನ್ನು ನೀಡುವುದು. ತಪ್ಪಿದಲ್ಲಿ ಪ್ರಸ್ತಾವನೆಯನ್ನು ಕೈಬಿಡಲಾಗುವುದು.